**CW : 4**

PW : 4

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.100/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಅಬೂಬಕ್ಕರ್ ಸಿದ್ದಿಕ್ |
| ತಂದೆಯ ಹೆಸರು | : | ಅಬ್ದುಲ್ ಹಾಜಿ |
| ಪ್ರಾಯ | : | 54 ವರ್ಷ |
| ಉದ್ಯೋಗ | | ಗುಜರಿ ವ್ಯಾಪಾರ |
| ವಾಸಸ್ಥಳ | : | ಉಳ್ಳಾಲು ಗ್ರಾಮ |

ದಿನಾಂಕ:**10.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಮಂಗಳೂರು ತಾಲ್ಲೂಕು ಉಳ್ಳಾಲದ ಅಕ್ಕರೆಕರೆಯಲ್ಲಿ ಗುಜರಿ ಅಂಗಡಿ ಇಟ್ಟುಕೊಂಡಿರುತ್ತೇನೆ. ಸುಮಾರು 1 ವರ್ಷದ ಹಿಂದೆ ಪೊಲೀಸರು ನಮ್ಮ ಅಂಗಡಿಯ ಹತ್ತಿರ ಬಂದು ಒಂದು ದಾಖಲೆಗೆ ಸಹಿಯನ್ನು ಪಡೆದಿರುತ್ತಾರೆ. ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಸಹಿ ಪಡೆದರು ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲಿಲಸರ ಯಾವುದೇ ವಸ್ತುಗಳನ್ನು ತಮ್ಮ ವಶ ಪಡೆದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ್ದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-8 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.8ಎ ಎಂದು ಗುರುತಿಸಲಾಯಿತು. ನಿಪಿ-8 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

ಆರೋಪಿಯನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ. ನಿಪಿ-7 ರಲ್ಲಿ ಕಾಣುವ ಬ್ಯಾಟರಿಗಳನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು : ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ.18.11.24 ರಂದು ಬೆ. 9.30 ಗಂಟೆಗೆ ಒಬ್ಬ ವ್ಯಕ್ತಿಯು ಇಯಾನ್ ಕಾರಿನಲಿಲ ಬಂದು ತನ್ನ ಹೆಸರನ್ನು ಹರೀಶ್ ನಾಯಕ್ ಎಂದು ತಿಳಿಸಿ ತಾನು ಬೊಂಡಾಡ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಐ ಡಿ ಕಾರ್ಡನ್ನು ತೋರಿಸಿ ಬುಳೇರಿಕಟ್ಟೆಯ ಸಾಜ ರಸ್ತೆಯಲ್ಲಿರುವ ಟವರಿನಲ್ಲಿ ಅಳವಡಿಸಿದ್ದ

24 ಬ್ಯಾಟರಿಗಳು ಕೆಟ್ಟು ಹೋಗಿರುವ ಕಾರಣ ಅವುಗಳನ್ನು ತೆಗೆದು ಹೊಸ ಬ್ಯಾಟರಿಗಳನ್ನು ಅಳವಡಿಸಲಾಗಿದೆ, ಕೆಟ್ಟುಹೋದ ಬ್ಯಾಟರಿಗಳನ್ನು ನಾನು ತಂದಿರುತ್ತೇನೆ ಎಂದು ಹೇರಿಕೊಂಡು ನನ್ನ ಗುಜರಿ ಅಂಗಡಿಗೆ ಬಂದಿದ್ದು ಆರೋಪಿಯು ಎಕ್ಸೆಲ್ ಕಂಪನಿಯ 14 ಬ್ಯಾಟರಿಗಳನ್ನು ನನಗೆ ನೀಡಿದ್ದು 10 ಬ್ಯಾಟರಿಗಳನ್ನು ನಾಳೆ ತರುವುದಾಗಿ ತಿಳಿಸಿ ಮರುದಿವಸ ಅಮರಾಜ್ ಕಂಪನಿಯ 10 ಬ್ಯಾಟರಿಗಳನ್ನು ತಂದಿದ್ದು ನಾನು ಎಲ್ಲಾ 24 ಬ್ಯಾಟರಿಗಳಿಗೆ ಆರೋಪಿಗೆ 48 ಸಾವಿರ ನಗದು ಕೊಟ್ಟು ಖರೀದಿಸಿ ಮಾರಾಟಕ್ಕಾಗಿ ನನ್ನ ಅಂಗಡಿಯಲ್ಲಿ ಇಟ್ಟಿದ್ದೆನು ಎಂದರೆ ಸುಳ್ಳು.

ದಿ.6-12-24 ರಂದು ಪೊಲೀಸರು ಆರೋೀಪಿಯೊಂದಿಗೆ ನನ್ನ ಅಂಗಡಿಗೆ ಬಂದು ಆರೋಪಿ ತೋರಿಸಿಕೊಟ್ಟಂತೆ ಮಾರಾಟ ಮಾಡಿದ ಬ್ಯಾಟಡಿಗಳ ಬಗ್ಗೆ ಕೇಳಲಾಗಿ ನಾನು ಎಲ್ಲಾ 24 ಬ್ಯಾಟರಿಗಳನ್ನು ನಿಪಿ-8 ಮಹಜರು ಮೂಲಕ ನೀಡಿರುವುದನ್ನು ಪೊಲೀಸರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ನಿಪಿ-8 ಕ್ಕೆ ನನ್ನ ಗುಜರಿ ಅಂಗಡಿಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ಪೊಲಿಸೇರಿಗೆ ದಿ.6-12-24 ರಂದು ಈಗ ಓದಿ ಹೇಳಿದಂತೆ "ನಾನು ಮೇಲಿನ ವಿಳಾಸದಲ್ಲಿ ಕುಟುಂಬದೊಂದಿಗೆ ------- ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆಯುನ್ನ ನೀಡಿದ್ದೆನು ಎಂದರೆ ಸುಳ್ಳು. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 4**

PW : 4